8) ಅಲ್ಲದೆ ನಿಗಮಕ್ಕೆ ಮುಖ್ಯವಾಗಿ ಬಂಡವಾಳದ ಕೊರತೆಯಿಂದಾಗಿ ಕೃಷಿ ಎಂಜಿನೀಯರಿಂಗ್ ಸೇವಾ ವಿಭಾಗದಲ್ಲಿ ಅನೇಕ ಬುಲ್‌ಡೋಜರ್ ಮತ್ತು ಬಾವಿ ಕೊರೆಯುವ ಯಂತ್ರಗಳು ಶಿಥಿಲಾವಸ್ಥೆಯನ್ನು ನಿಗಮಕ್ಕೆ ಹಣದ ಕೊರತೆಯಿಂದ ಸಾಧ್ಯವಾಗದ ಕಾರಣ ನಿಗಮಕ್ಕೆ ಉತ್ಪತ್ತಿ ಕಡಿಮೆಯಾಗುತ್ತಿದೆ.

ಈ ಮೇಲ್ಪಟ್ಟ ಕಾರಣಗಳಿಂದ ನಿಗಮವು ವರ್ಷ ವರ್ಷ ನಷ್ಟವನ್ನು ಅನುಭವಿಸಬೇಕಾಗುತ್ತದೆ.

ಈ) ಸರ್ಕಾರದ ಪರಿಶೀಲನೆಯಲ್ಲಿದೆ.

ನೀರಾವರಿ ತೆರಿಗೆ ಬಾಕಿಗಾಗಿ ಸರ್ಕಾರಿ ಪಡಾ ಮಾಡುತ್ತಿರುವ ಕ್ರಮ ಕುರಿತು.

1703 - ಪ್ರೊ. ಎಂ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೀರಾವರಿ ತೆರಿಗೆ ಬಾಕಿಗಾಗಿ ಕಂದಾಯ ಇಲಾಖೆಯ ಅಧಿಕಾರಿಗಳು ರೈತರ ಇಡೀ ಜಮೀನನ್ನು 'ಸರ್ಕಾರಿ ಪಡಾ' ಎಂದು ದಾಖಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಕ್ರಮದಿಂದಾಗಿ ನೀರಾವರಿ ತೆರಿಗೆಯ ಬಾಕಿ ವಸೂಲಿಯಲ್ಲಿ ಪ್ರಗತಿಯಾಗಿದೆಯೇ?

ಇ) ಆಗಿದ್ದಲ್ಲಿ ಅಂಕಿ ಅಂಶಗಳನ್ನು ಕೊಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಇಲ್ಲ

ಆ) ಪ್ರಶ್ನೆಗೆ ನೀಡಿರುವ ಉತ್ತರದನ್ವಯ ಇದು ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ

ಭೂ ಸುಧಾರಣೆ ಕಾನೂನು

1708 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಂದಾಯ ಇಲಾಖೆಯವರು ಜಮೀನು ಖರೀದಿ ಮಾಡಿದವರಿಗೆ ಭೂ ಸುಧಾರಣೆ ಕಾನೂನಿನನ್ವಯ ನೋಟೀಸ್ ಕೊಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕಂದಾಯ ಇಲಾಖೆಯವರು ಸದರಿ ನೋಟೀಸ್ ಕೊಡಲು ಅದಕ್ಕೆ ಮುದ್ದಾತ್ತಾ ನಿಯಮಿಸಿಲ್ಲವೆ?

ಇ) ಸದರಿ ಖರೀದಿ ವ್ಯವಹಾರ ಆದಾಗಿನಿಂದ ನಿರ್ದಿಷ್ಟವಾದ (ಮುದ್ದಾತ್ತಾನ್ನು) ಅವಧಿಯನ್ನು ನೋಟೀಸ್ ತೆರೆಯಲು ನಿರ್ದಿಷ್ಟ ಪಡಿಸಲು ಮಾನ್ಯ ಸರ್ಕಾರದ ಆಡೆತಡೆಗಳು ಏನು?

ಈ) ಧಾರವಾಡ ಜಿಲ್ಲೆಯಲ್ಲಿ ಸನ್ 1989-90ರಲ್ಲಿ ಎಷ್ಟು ಜನರಿಗೆ ನೋಟೀಸ್ ನೀಡಲಾಗಿದೆ? ಎಷ್ಟು ಕೇಸುಗಳಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಹೌದು.

ಆ) ಭೂ ಸುಧಾರಣೆ ಕಾಯಿದೆ ಕಲಂ 79 (ಎ) (4) (5), 79 (ಬಿ) (2) (33), 79 (ಸಿ) ಮತ್ತು ಕಲಂ 81 (ಎ) (3) ಹಾಗೂ ಭೂ ಸುಧಾರಣಾ ನಿಯಮ 29, 31, 32, 35(3)ಗಳ ಅಡಿಯಲ್ಲಿ ತಹಶೀಲ್ದಾರ್‌ರವರು ಅಂತಹ ನೋಟೀಸನ್ನು ಕೊಡಲು ಅಧಿಕಾರ ಹೊಂದಿರುತ್ತಾರೆ. ಭೂ ಸುಧಾರಣಾ ಕಾಯಿದೆ ಕಲಂ 83ರಂತೆ